ನಾನು ಆಕ್ಷೇಪಣೆ ಮಾಡುತ್ತಾ ಇಲ್ಲ. ಈ ಸದನದ ಬಗ್ಗೆ ಸದಸ್ಯರುಗಳಿಗೂ ಕಳಕಳಿ ಇರಬೇಕು ಎನ್ನತಕ್ಕಂಥಾದ್ದನ್ನು ಈ ಮೂಲಕ ನಾನು ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ನೂರು ದಿವಸ ಈ ಶಾಸನಸಭೆ ಕೆಲಸಕಾರ್ಯಗಳನ್ನು ನಡೆಸಬೇಕು ಎಂದು ಹೇಳಿ ತಾತ್ವಿಕವಾಗಿ ಒಪ್ಪಿಗೆಯಾಗಿದೆ. ಯಾವ ಯಾವ ತಾರೀಖಿನಿಂದ ಮಾಡಬೇಕು ಎನ್ನುವುದು ನಿಶ್ಚಯ ಆಗುತ್ತದೆ. ಇವತ್ತು ಅಥವಾ ನಾಳೆ ಒಳಗಾಗಿ ಈ ಸಭೆ ಮುಗಿಯುವುದರೊಳಗಾಗಿ ಇಡೀ ವರ್ಷದ ಕಾರ್ಯಕ್ರಮವನ್ನು ತಾರೀಖುವಾರು ನಿಶ್ಚಯಮಾಡಿ ಅನೌನ್ಸ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಇವತ್ತೇ ಕೊನೆಯ ದಿವಸ ಎಂದು ಇತ್ತು. ಆದ್ದರಿಂದ ಅದು ಗೊತ್ತಾಗುತ್ತಾ ಇಲ್ಲ. ಏನಾದರೂ ಇನ್ನೂ 4-5 ದಿವಸ ಸಭೆ ಮುಂದೆ ಹೋಗುತ್ತದೆಯೋ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇವತ್ತು ಕೊನೇ ಆಗುವುದಾದರೆ ಇವತ್ತೇ ಅನೌನ್ಸ್ ಮಾಡುತ್ತೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅಧ್ಯಕ್ಷರೆ, ಇವರು ಕಾಲ ನಿಗದಿ ಮಾಡುತ್ತೇವೆ ಎಂದು ಹೇಳಿದರು. ಹಿಂದೆ ಈ ಸಭೆ ಬಜೆಟ್ ಅಧಿವೇಶನ, ದಸರಾ ಅಧಿವೇಶನ, ಚಳಿಗಾಲದ ಅಧಿವೇಶನ ಎಂದು ಹೇಳಿ ನಡೆಯುತ್ತಾ ಇತ್ತು. ಈಗ ಆ ಪದ್ಧತಿ ಎಲ್ಲಾ ಹೋಗಿಬಿಟ್ಟಿದೆ. ಆದ್ದರಿಂದ ಆ ಕಾಲಗಳನ್ನು ನಿಗದಿ ಮಾಡಿದರೆ ಒಳ್ಳೆಯದು.

6) ದೈಹಿಕ ತರಬೇತಿ ಪಡೆದ ನಿರುದ್ಯೋಗಿಗಳು.

ಶ್ರೀ ಕೆ. ಹರ್ಷಕುಮಾರ್‌ಗೌಡ:- ಅಧ್ಯಕ್ಷರೆ, ಈ ರಾಜ್ಯದಲ್ಲಿ ಇದು ಒಂದು ಯುವಕರ ಉದ್ಯೋಗದ್ದು ಒಂದು ಪ್ರಮುಖವಾದಂತಹ ವಿಚಾರ. ಈ ದೈಹಿಕ ಶಿಕ್ಷಕರ ತರಬೇತಿ ಪಡೆದಂತಹ ಸುಮಾರು 26 ಸಾವಿರಕ್ಕೂ ಮಿಗಿಲಾದಂತಹ ಯುವಕರು ರಾಜ್ಯದಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಆದರೆ ರಾಜ್ಯದ ಶಿಕ್ಷಣ ಇಲಾಖೆ ಇದುವರೆಗೂ ಕೂಡ ಅವರಿಗೆ ಉದ್ಯೋಗವನ್ನು ಕೊಡುವ ನಿಟ್ಟಿನಲ್ಲಿಯೂ ಕೂಡ ಯಾವುದೇ ರೀತಿಯಲ್ಲಿ ಕಾರ್ಯ ಪ್ರವೃತ್ತರಾಗಿಲ್ಲ ಎಂದು ಹೇಳಿ ಆ ಯುವಕರು ಪ್ರತಿನಿತ್ಯ ಎಲ್ಲಾ ಶಾಸಕರನ್ನು ಭೇಟಿ ಮಾಡಿ, ಇವತ್ತು ಕೂಡ ನಮ್ಮ ಹತ್ತಿರ ಬಂದಿದ್ದಾರೆ. ಕಳೆದ ಸಾರಿ ನಮ್ಮ ಮಾನ್ಯ ಶಿಕ್ಷಣ ಸಚಿವರ ಹತ್ತಿರ ನಾವು ಪ್ರಶ್ನೆ ಕೇಳಿದಾಗ ಅವರು ಕರ್ನಾಟಕ ರಾಜ್ಯದಲ್ಲಿ 651 ಸಿಪಿಎಡ್ ಉದ್ಯೋಗಗಳು ಮಾತ್ರ ಖಾಲಿ ಇವೆ ಎಂದು ಹೇಳಿದರು. ಆದರೆ ಈಗ ಸುಮಾರು 12 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ತಿಳಿದುಬಂದಿದೆ. ಜೊತೆಗೆ ಇವರಿಗೆ ಆಗಲೇ ವಯಸ್ಸು ಆಗುತ್ತಾ ಇದೆ. 1987ರಂದು ಸುಮಾರು 15 ರಿಂದ 20 ಸಾವಿರ ಶಿಕ್ಷಕರನ್ನು ಆಯ್ಕೆ ಮಾಡಿದೆ. ಸರ್ಕಾರ ಈಗಾಗಲೇ ಅದರ ಬಗ್ಗೆ ಕಾರ್ಯಪ್ರವೃತ್ತವಾಗಿದೆ. ಆದರೆ ಈವರೆಗೂ ಕೂಡ ದೈಹಿಕ ಶಿಕ್ಷಕರನ್ನು ಆಯ್ಕೆ ಮಾಡುತ್ತಿಲ್ಲ, ಏಕೆ? ಏಕೆಂದರೆ ಇವತ್ತು ಮಕ್ಕಳಲ್ಲಿ ಈ ಕ್ರೀಡೆಯ ಬಗ್ಗೆ ಒಂದು ತರಬೇತಿಯಾಗಲಿ, ಅದರ ಬಗ್ಗೆ ಪ್ರೋತ್ಸಾಹ ಕೊಡುವಂತಹ ವ್ಯವಸ್ಥೆ ಆಗದೆ ಇದ್ದರೆ ಹೇಗೆ? ಮಾನ್ಯ ಮಂತ್ರಿಗಳಾದ ರಾಮಸ್ವಾಮಿಯವರು ಶಿಕ್ಷಣ ಕ್ಷೇತ್ರದಲ್ಲಿಯೂ ಕೂಡ ಸೇವೆ ಸಲ್ಲಿಸುತ್ತಿದ್ದಾರೆ. ತಮಗೆ ಗೊತ್ತಿರಬಹುದು. ಇಡೀ ರಾಜ್ಯದಲ್ಲಿ ಏಡೆಡ್ ಸ್ಕೂಲ್‌ಗಳಲ್ಲಿ ಶಿಕ್ಷಕರ ಹುದ್ದೆಗಳಿಗೆ ಆಯ್ಕೆ ಮಾಡಿಕೊಳ್ಳುತ್ತಿಲ್ಲ. ಅಧ್ಯಕ್ಷರೆ ಇದುವರೆಗೂ ಸರ್ಕಾರದಲ್ಲಿ ಆದೇಶ ಇದೆ. 6 + 1, 4+1, ಆಯ್ಕೆ ಮಾಡಬೇಕೆಂದು ಇದೆ. ಅರೆಸರ್ಕಾರಿ ಶಿಕ್ಷಣ ಸಂಸ್ಥೆಯಲ್ಲಿ ಇದುವರೆಗೂ ಈ ದೈಹಿಕ ಶಿಕ್ಷಕರ ಆಯ್ಕೆ ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ತುರ್ತಾಗಿ ಕಾರ್ಯ ಪ್ರವೃತ್ತರಾಗಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಅರಿಕೆ. ಇಂಥ ವಿಷಯಗಳನ್ನು ತರುವುದಕ್ಕೆ ನಮ್ಮ ನಿಯಮಾವಳಿಯಲ್ಲಿ ಅನೇಕ ಅವಕಾಶಗಳು ಇವೆ. ಗಮನ

ಸೆಳೆಯುವ ಸೂಚನೆಗಳನ್ನು ತರಬಹುದು ದೇಶದಲ್ಲಿ ಏನಾದರೂ ಅಂಥ ಅಲ್ಲೋಲ ಕಲ್ಲೋಲವಾಗುವಂಥ ಸಮಸ್ಯೆಗಳು ಬಂದರೆ, ನೋಟೀಸ್ ಕೊಡುವುದಕ್ಕೆ ಸಾಕಷ್ಟು ಕಾಲ ಇಲ್ಲದೆ ಹೋದರೆ ಅಂಥ ವಿಷಯಗಳನ್ನು ಇಲ್ಲಿ ಎತ್ತಬಹುದು. ಇಂಥ ವಿಷಯಗಳನ್ನು ಎತ್ತಿದರೆ ಉತ್ತರ ಬಯಸುವುದೂ ಸಾಧ್ಯವಿಲ್ಲ. ಉತ್ತರ ಕೊಡುವುದಕ್ಕೂ ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:- ನಾನು ಒಂದು ಪ್ರಿವಿಲೇಜ್ ನೋಟೀಸ್ ಬರೆದು ಕಳುಹಿಸಿದ್ದೇನೆ. ಅದನ್ನು ದಯವಿಟ್ಟು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕು ಸ್ವಾಮಿ.

ಅಧ್ಯಕ್ಷರು:- ಅದನ್ನು ಪರಿಶೀಲನೆ ಮಾಡುತ್ತೇನೆ.

7) ಕೆಮ್‌ಕೊ ಫ್ಯಾಕ್ಟರಿಯಲ್ಲಿ ಆದ ಅವ್ಯವಹಾರಕ್ಕೆ ಸಿ.ಬಿ.ಐ. ತನಿಖೆ.

ಶ್ರೀ ವಿನಯ್‌ಕುಮಾರ್ ಸೊರಕೆ:- ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧ ಪಟ್ಟ ಕೆಮ್‌ಕೊ ಚಾಕ್‌ಲೆಟ್ ಫ್ಯಾಕ್ಟರಿ, ಬೊಂಬಾಯಿಯಲ್ಲಿ i ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಅವ್ಯವಹಾರ ನಡೆದು ಅದರ ಮಟ್ಟಿಗೆ ಸಿ.ಬಿ.ಐ. ತನಿಖೆ ಆಗಬೇಕು ಎನ್ನುವ ರೀತಿಯಲ್ಲಿ ಅದರ ಆಡಳಿತ ಮಂಡಳಿಯವರೇ ನಿರ್ಧಾರ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರ ಮಟ್ಟಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಅದೇ ರೀತಿಯಾಗಿ ಇವತ್ತು ಶೇಕಡ 80ರಷ್ಟು ಷೇರ್ ಸರ್ಕಾರದವ್ದೇ ಇರುತ್ತದೆ.

ಅಧ್ಯಕ್ಷರು:- ಈಗ ನಿಮಗೆ ಸಿ.ಬಿ.ಐ. ಬೇಕೋ, ಸಿ.ಓ.ಡಿ. ಬೇಕೋ?

ಶ್ರೀ ವಿನಯಕುಮಾರ್ ಸೊರಕೆ :- ಸಿ.ಬಿ.ಐ.ನಿಂದ ತನಿಖೆಯಾಗಬೇಕು. ಇದು ಬೊಂಬಾಯಿಯಲ್ಲಿ ಆಗಿರುವುದು.

ಅಧ್ಯಕ್ಷರು:- ಓ, ಬೊಂಬಾಯಿಯಲ್ಲಿ ಆಗಿರುವುದು.

ಶ್ರೀ ವಿನಯ್‌ಕುಮಾರ್ ಸೊರಕೆ :- ಈಗ ಶೇಕಡ 80ರಷ್ಟು ಷೇರ್ ಸರ್ಕಾರದ್ದು ಇದೆ.

ಅಧ್ಯಕ್ಷರು:- ದಯವಿಟ್ಟು ಅದನ್ನು ಬರೆದು ಕಳುಹಿಸಿಕೊಡಿ.

8) ಅಧೀನಶಾಸನಸಮಿತಿಕಾರ್ಯದಿಂದಸದಸ್ಯರಚಾರಿತ್ರ್ಯವಧೆ,ರಕ್ಷಣೆಗೆ ಮನವಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೆ, ಸದಸ್ಯರ ಹಕ್ಕಿನ ರಕ್ಷಣೆಗೋಸ್ಕರ ತಮ್ಮಲ್ಲಿ ಹಲವಾರು ಬಾರಿ ಮೊರೆ ಇಟ್ಟಿದ್ದೇವೆ. ಈ ಸದನದ ಸದಸ್ಯ ಮುಕ್ತ ವಾತಾವರಣದಲ್ಲಿ ನಿರ್ಭೀತನಾಗಿ ಕೆಲಸ ಮಾಡುವುದಕ್ಕೆ ರಕ್ಷಣೆ ಕೊಡುವಂಥ ಗೌರವ ಪೀಠದಲ್ಲಿ ತಾವು ಇದ್ದೀರಿ. ತಮ್ಮಿಂದ ನಮ್ಮ ರಕ್ಷಣೆ ಆಗಬೇಕಾಗಿದೆ. ಸದನದ ಅಧೀನ ಶಾಸನ ಸಮಿತಿ ಮೇಲಿಂದ ಮೇಲೆ ಚಾರಿತ್ರ್ಯವಧೆ ಮಾಡುವಂತಹ ಕಾರ್ಯ ಮಾಡುತ್ತಾ ಇದೆ ಎನ್ನತಕ್ಕಂಥ ಸೂಚನೆಯನ್ನು ತಮಗೆ ಕೊಟ್ಟು ನಾನು ರಕ್ಷಣೆಯನ್ನು ಕೇಳುತ್ತಿದ್ದೇನೆ. ಹಲವಾರು ಬಾರಿ ತಮ್ಮಲ್ಲಿ ಮೊರೆ ಇಟ್ಟಿದ್ದೇನೆ. ಇದುವರೆಗೂ ನನ್ನ ಮೊರೆಗೆ ತಮ್ಮಿಂದ ಅನುಮತಿ ಸಿಗಬಹುದು ಎಂದು ನಿರೀಕ್ಷೆ ಮಾಡುತ್ತಿದ್ದೇನೆ. ದಯಮಾಡಿ ತಾವು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಈ ಸದನದ ಸದಸ್ಯನಾದ ನಾನು ನಿರ್ಭೀತವಾಗಿ ಕೆಲಸ ಮಾಡುವುದಕ್ಕೆ, ನಿಷ್ಕಳಂಕವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಅದರ ಬಗ್ಗೆ ಗಮನಹರಿಸಿದ್ದೇನೆ. ಅದರ ಬಗ್ಗೆ ರೂಲಿಂಗ್ ಇವತ್ತು ತಯಾರಾದರೆ ಕೊಡುತ್ತೇನೆ. ಇಲ್ಲದಿದ್ದರೆ ಕೊನೆಯ ದಿವಸ ನಾಳೆ ಕೊಡುತ್ತೇನೆ.

ಶ್ರೀ ಬದ್ರಾಳಿ ಹಂಪನಗೌಡ:- ಮಾನ್ಯ ಅಧ್ಯಕ್ಷರೆ, ಹುಟ್ಟುವಳಿ ಮಾರಾಟ ಸಹಕಾರ